

ಯಮುನೋತ್ರಿಯಲ್ಲಿ ಶಿಖರಗಳ ಹೋಳಿಯಾಟ



ಗಂಗೋತ್ರಿಯ ದೃಶ್ಯ



ಚಾರಣದ ಹಾದಿಯಲ್ಲಿ ಕಂಡ ಸನ್ಯಾಸಿ

ತಂದು ಗುಡ್ಡಹಾಕಿ ಹೋದಂತಹ ಶಿಥಿಲರಾಶಿ. ಈ ಅಸ್ಥಿರತೆ ಹಿಮಾಲಯಕ್ಕೆ ಜನ್ಮಜಾತವಾಗಿ ಬಂದ ಶಾಪ. ಭೂವಿಜ್ಞಾನದ ಪ್ರಕಾರ, ಹಿಮಾಲಯ, ಜನ್ಮ ತಳೆದಿದ್ದೇ ಭೂಖಂಡಗಳು ಪರಸ್ಪರ ಡಿಕ್ಕಿಹೊಡೆದಾಗ, ಒಳಗಿನ ಭೂಪದರಗಳು ಒಂದರೊಳಗೊಂದು ಸೇರಿ ಮೇಲಕ್ಕೆಗರಿ ನಿಂತಿತು. ಭೂಮಿಗೀತದ ಈ ಮಹಾನಾಟಕ ನಡೆದಿದ್ದು ಕೋಟ್ಯಂತರ ವರುಷಗಳ ಹಿಂದೆ. ಪರ್ವತಗಳ ಮೈ ಕಡಿದು ಹೊಲ ಮಾಡಿರುವುದು, ರಸ್ತೆಗೆಂದು ಅವುಗಳ ಮಗ್ಗುಲು ಮುರಿಯುತ್ತಿರುವುದು, ಸುರಂಗ ಕೊರೆಯುತ್ತಿರುವುದು, ಅಣೆಕಟ್ಟು ನಿರ್ಮಿಸುತ್ತಿರುವುದು ಅದರ ತಪೋಮಗ್ನತೆಯನ್ನು ಕೆಡಿಸುತ್ತಿದೆ. ಭೂಪದರಗಳು ಒಳಗಿನ ಟೊಳ್ಳುತನದಿಂದ ಮಿಸುಕಾಡುತ್ತ, ಮೈಮುರಿಯುತ್ತ ಕಂಪನ ಎಬ್ಬಿಸುತ್ತಿವೆ. ಪರ್ವತಗಳು ಕುಸಿಯುತ್ತಿರುವುದು ಸರ್ವತ್ರ ಕಾಣುತ್ತದೆ. ಕೆಲವೆಡೆ ಪರ್ವತದ ಪಾರ್ಶ್ವವು ಸುಲಿದು ಬಿದ್ದು, ಮಣ್ಣುಕಲ್ಲುಗಳು ಹೊಳೆಗೆ ಮಗುಚಿಕೊಂಡು, ಅದರ ದಿಕ್ಕನ್ನೆ ಬದಲಿಸಿವೆ. ಮೇಘಸ್ಫೋಟದಲ್ಲಿ ಹೊಳೆದಡದ ಊರೂರೇ ಕೊಚ್ಚಿಹೋಗಿವೆ.

ಹಿಮಪರ್ವತಗಳು ಹೆಸರಿಗಷ್ಟೆ ಅಚಲ. ವಾಸ್ತವದಲ್ಲಿ ಸಚಲ, ಸಕಂಪಿತ. ವೃದ್ಧನ ಕಾಯದಂತೆ ಅವು ಒಪ್ಪವಳಿಯುತ್ತಿವೆ. ಇವಕ್ಕೆ ಹೋಲಿಸಿದರೆ, ನಮ್ಮ ಸೀಮೆಯ ಬೆಟ್ಟಗುಡ್ಡಗಳಿಗೆ ಎತ್ತರ–ಆಳ ಕಡಿಮೆ. ಆದರೆ ಕುಸಿಯದೆ ನಿಲ್ಲುವ ಗಟ್ಟಿತನ ಅವಕ್ಕಿದೆ. ನಮ್ಮ ಸೀಮೆಯ ಗುಡ್ಡಬೆಟ್ಟಗಳನ್ನು ಹಿಮಾಲಯದ ಪರ್ವತಗಳ ಜತೆ ಹೋಲಿಸಿ ಅಲ್ಲಗಳೆಯುವುದು ತಪ್ಪೆಂದು ನನಗೆ ಚಾರಣ ಕಲಿಸಿತು. ನಿಜ, ಪರ್ವತಗಳ ಬೃಹತ್ತನ್ನು ಎದುರುಗೊಳ್ಳಲು ಹೋದ ಚಾರಣಿಗರ–ಪರ್ವತಾರೋಹಿಗಳ ಅಹಮನ್ನು, ಹಿಮಾಲಯವು ನಿರ್ದಯವಾಗಿ ಒಡೆದು ನೂರುನುಚ್ಚು ಮಾಡುತ್ತದೆ. ಕುಬ್ಜಗೊಳಿಸುತ್ತದೆ. ಆದರೆ ಅವರ ವ್ಯಕ್ತಿತ್ವವನ್ನು ನಾಶಮಾಡುವುದಿಲ್ಲ. ಅದನ್ನೇರಿ ಇಳಿದ ಬಳಿಕ ತಾನೇ ಮುರಿದ ಆತ್ಮವಿಶ್ವಾಸವನ್ನು ಅವರಿಗೆ ಮರಳಿಸುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**